ಶ್ರೀ ಎ. ಲಕ್ಷ್ಮೀಸಾಗರ್ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ)

ತಾಲ್ಲೂಕು	ಕೇಸರಿ ಕಾರ್ಡುಗಳು
ಚಿಕ್ಕಮಗಳೂರು	೧೩,೬೦೪
ಕಡೂರು	೧೪,೯೨೬
ಕೊಪ್ಪ	೪,೬೧೭
ಮೂಡಿಗೆರೆ	೧೧,೫೨೦
ಎನ್.ಆರ್. ಪುರ	೩,೧೫೯
ಶೃಂಗೇರಿ	೨,೯೪೨
ತರೀಕೆರೆ	೧೨,೪೫೦
ಒಟ್ಟು	೬೩,೨೧೮

ಆ) ಐ.ಟಿ.ಡಿ.ಪಿ. ತಾಲ್ಲೂಕುಗಳಾದ ಕೊಪ್ಪ, ಶೃಂಗೇರಿ, ಮೂಡಿಗೆರೆ ಮತ್ತು ಎನ್ ಆರ ಪುರಗಳಲ್ಲಿನ ಕೇಸರಿ ಪಡಿತರ ಚೀಟಿದಾರರಿಗೆ ಕೇಂದ್ರ ಸರ್ಕಾರದ ನೀತಿಯಂತೆ ೫ ಕೆ.ಜಿ. ಅಕ್ಕಿ ಮತ್ತು ಪ್ರತಿ ವಯಸ್ಕರಿಗೆ ೫ ಕೆ.ಜಿ, ಅಥವಾ ಪ್ರತಿ ಕಾರ್ಡಿಗೆ ೨೫ ಕೆ.ಜಿ.ಗೆ ಮೀರದಂತೆ ಗೋಧಿಯನ್ನು ವಿತರಿಸಲಾಗುತ್ತಿದೆ. ಐ.ಟಿ.ಡಿ.ಪಿ. ಯೇತರ ತಾಲ್ಲೂಕುಗಳಾದ ಚಿಕ್ಕಮಗಳೂರು, ತರೀಕೆರೆ ಕಡೂರುಗಳಲ್ಲಿನ ಕೇಸರಿ ಪಡಿತರ ಚೀಟಿದಾರರಿಗೆ ಜೂನ್ ೮೮ರಿಂದ ಆಹಾರ ಧಾನ್ಯಗಳನ್ನು ವಿತರಣೆ ಮಾಡುತ್ತಿಲ್ಲ.

ಇ) ಹೌದು. ಕೇಸರಿ ಪಡಿತರ ಚೀಟಿದಾರರಿಗೆ ಸರ್ಕಾರದ ನೀತಿಯಂತೆ ಆಹಾರ ಧಾನ್ಯಗಳನ್ನು ಸರಬರಾಜು ಮಾಡಲು ಕೇಂದ್ರ ಸರ್ಕಾರಕ್ಕೆ ೬೫,೦೦೦ ಮೆ. ಟನ್ ಅಕ್ಕಿಯನ್ನು ಬಿಡುಗಡೆ ಮಾಡಲು ಕೋರಲಾಗಿದೆ. ಕೇಂದ್ರ ಸರ್ಕಾರವು ರಾಜ್ಯಕ್ಕೆ ಹೆಚ್ಚಿನ ದಾಸ್ತಾನನ್ನು ಬಿಡುಗಡೆ ಮಾಡಿದಲ್ಲಿ ಜಿಲ್ಲೆಯ ಐ.ಟಿ.ಡಿ.ಪಿ. ಯೇತರ ತಾಲ್ಲೂಕುಗಳಲ್ಲಿ ಕೇಸರಿ ಪಡಿತರದಾರರಿಗೆ ಆಹಾರ ಧಾನ್ಯಗಳನ್ನು ವಿತರಿಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಅಂದರೆ ೫೧ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದಿಡಲಾಯಿತು.

೧೯೮೬–೮೭ ಮತ್ತು ೧೯೮೭–೮೮ನೇ ಸಾಲಿನಲ್ಲಿ ಕಂದಾಯ ಇಲಾಖೆಯಿಂದ ದಿನಪತ್ರಿಕೆ ಜಾಹಿರಾತುಗಳ ಬಗ್ಗೆ ಮಾಡಿದ ವೆಚ್ಚ

೨೯೦೧. ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೬–೮೭ ಮತ್ತು ೧೯೮೭–೮೮ನೇ ಸಾಲಿನಲ್ಲಿ ಕಂದಾಯ ಇಲಾಖೆಯಿಂದ ರಾಜ್ಯಾದ್ಯಂತ ಇರುವ ದಿನಪತ್ರಿಕೆಗಳಿಗೆ ಜಾಹೀರಾತುಗಳನ್ನು ಪ್ರಕಟಿಸಲಂ ಕೊಟ್ಟ ವೆಚ್ಚವೆಷ್ಟು.

ಆ) ಯಾವ ಯಾವ ಪತ್ರಿಕೆಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ ?